**ಸಾಕ್ಷಿಯನ್ನು ದಿಃ 14.11.2025 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 1, 6 ಮತ್ತು 9 ಪರ ಶ್ರೀ C.G.ವಕೀಲರಿಂದ.**

ಕೆಂಪನಹಳ್ಳಿ ಗ್ರಾಮದ ಐ ಟಂ ನಂ 25 ರ ಸ್ವತ್ತಿಗೆ ಸಂಬಂಧಿಸಿದಂತೆ ಆಗಿರುವ ಕ್ರಯ ಪತ್ರದ ಒಕ್ಕಣೆಯನ್ನು ಓದಿ ಕೇಳಿ ಸಾಕ್ಷಿಗೆ ಕೇಳಲಾಗಿ ಅದನ್ನು ಒಪ್ಪಿ ಕೊಂಡಿದ್ದು ಪ್ರತಿವಾದಿ 4 ರ ಪರ ವಕೀಲರ ಕೋರಿಕೆ ಮೇರೆಗೆ **ಅದನ್ನು ನಿ.ಡಿ 4 ಎಂದು ಗುರುತಿಸಲಾಯಿತು**. ಈ ಕ್ರಯ ಪತ್ರದ ಪ್ರಕಾರ ಪೂರ್ವ ಪಶ್ಚಿಮ 8 ಗಜ್ ದಕ್ಷಿಣ ಉತ್ತರ 32 ಗಜ್ ಗಳನ್ನು 5 ಸಾವಿರ ಗಳಿಗೆ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ಆನ್ ಡಿಮ್ಯಾಂಡ್ ಹಣ ಸಂದಾಯದ ರಶೀದಿಯನ್ನು ತೋರಿಸಿ ಕೇಳಲಾಗಿ ಅದರಲ್ಲಿ ಅವರ ಅಣ್ಣನ ಸಹಿ ಇರುವುದಾಗಿ ಕೇಳಲಾಗಿ ಅದನ್ನು ಹೌದು ಎಂದು ಒಪ್ಪಿ ಕೊಂಡಿದ್ದು **ಅದನ್ನು ನಿ.ಡಿ 5 ಎಂದು ಗುರುತಿಸಲಾಯಿತು.**

ದಿಃ 15.10.1991 ರಂದು ದೊಡ್ಡಮಾವತೂರು ಗ್ರಾಮದ ಗೂಳಿಗೌಡ ಮಗ ಜಯರಾಮಯ್ಯ ಅವರಿಂದ 40 ಸಾವಿರ ಹಣವನ್ನು ಸಾಲವಾಗಿ ಪಡೆದು ದಾವಾ ಐ ಟಂ ನಂ 25 ಅನ್ನು ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ನನಗೆ ಏನು ಹೇಳಿಲ್ಲವೆಂದು ಹೇಳುತ್ತಾರೆ. ಸದರಿ ಸಾಲವನ್ನು 1995 ರಲ್ಲಿ ಪ್ರತಿವಾದಿ 1 ಅವರು ಸಾಲವನ್ನು ತೀರಿಸಿ ರಿಶೀದಿಯನ್ನು ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ದಾವಾ ಐ ಟಂ ನಂ 25 ಅನ್ನು ನನ್ನ ಅಣ್ಣ ಕ್ರಯಕ್ಕೆ ಪಡೆದ ಬಳಿಕ ಸದರಿ ಸ್ವತ್ತಿನ ಕಂದಾಯ ದಾಖಲೆಗಳು ಆತನ ಹೆಸರಿಗೆ ಬರುತ್ತಿತ್ತು ಎಂದರೆ ಸಾಕ್ಷಿ ದೊಡ್ಡವರ ಹೆಸರಿಗೆ ಇರುತ್ತಿತ್ತು ಎಂದು ಹೇಳುತ್ತಾರೆ. ನನ್ನ ಅಣ್ಣನ ಮರಣಾ ನಂತರ ಸದರಿ ಸ್ವತ್ತಿನ ಖಾತೆ ಪ್ರತಿವಾದಿ 1 ಅವರ ಹೆಸರಿಗೆ ಬರುತ್ತಿದೆ ಎಂದರೆ ಸಾಕ್ಷಿ ನನ್ನ ಅಣ್ಣನ ಮರಣಾ ನಂತರ ಮಾಡಿಸಿಕೊಂಡಿದ್ದಾರೆ ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ.

ಈಗಲೂ ಸಹ ಸದರಿ ಸ್ವತ್ತಿನ ಖಾತೆ ಪ್ರತಿವಾದಿ 1ಅವರ ಹೆಸರಿಗೆ ಇರುತ್ತದೆಎಂದರೆ ಸಾಕ್ಷಿ ಈಗ ಮಾಡಿಕೊಂಡಿರುತ್ತಾರೆಂದು ಹೇಳುತ್ತಾರೆ. ಖಾತೆ ಮಾಡಿಸಿಕೊಳ್ಳು ಸಮಯದಲ್ಲಿ ತಕರಾರು ನೀಡಿದ್ದು ಪಂಚಾಯತಿಯವರು ಹಿಂದಿನ ದಿನಾಂಕವನ್ನು ಹಾಕಿ ರದ್ದು ಮಾಡಿರುತ್ತಾರೆಂದು ಹೇಳುತ್ತಾರೆ. ಸದರಿ ಆದೇಶದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲವೆಂದರೆ ಸಾಕ್ಷಿ ಅದರ ವಿಚಾರ ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ.

ದಾವಾ ಐ ಟಂ ನಂ 25 ರ ಮನೆಯ ವಿದ್ಯುತ್ ಬಿಲ್ ಖರೀದಿ ಮಾಡಿದಾಗಿನಿಂದ ನನ್ನ ಅಣ್ಣ ಮತ್ತು ಪ್ರತಿವಾದಿ 1 ಅವರ ಹೆಸರಿಗೆ ಬರುತ್ತಿದೆ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಸಾಕ್ಷಿಗೆ ಸದರಿ ರಶೀದಿಯ ಪ್ರತಿಯನ್ನು ತೋರಿಸಿ ಕೇಳಲಾಗಿ ಒಪ್ಪಿಕೊಂಡಿದ್ದು **ಅದನ್ನು ನಿ.ಡಿ 6 ಎಂದು ಗುರುತಿಸಲಾಯಿತು**. 1991 ರಲ್ಲಿ ಸದರಿ ಸ್ವತ್ತನ್ನು ನನ್ನ ಅಣ್ಣ ಖರೀದಿ ಮಾಡಿದ್ದು ಅದು ಅವರ ಸ್ವಯಾರ್ಜಿತ ಸ್ವತ್ತಾಗಿದ್ದರಿಂದ ನಾನು ಯಾವುದೇ ಚಕಾರವನ್ನು ಎತ್ತಿಲ್ಲವೆಂದರೆ ಸರಿಯಲ್ಲ.

ನನ್ನ ಅಣ್ಣ ಹೋಟೇಲ್ ಶಿವಮ್ಮಾ ಮತ್ತು ಇತರರ ವಿರುದ್ದ ಓಎಸ್ 508/2001 ರಂತೆ ದಾವಾ ಐ ಟಂ ನಂ 25 ಕ್ಕೆ ಸಂಬಂಧಿಸಿದಂತೆ ದಾವೆ ದಾಖಲು ಮಾಡಿದ್ದರು ಎಂದರೆ ಸರಿ. ಸದರಿ ದಾವೆಯ ವಾದ ಪತ್ರ ಮತ್ತು ಆದೇಶ ಪುಟದ ದೃಡಿಕೃತ ನಕಲನ್ನು ತೋರಿಸಿ ಕೇಳಲಾಗಿ ಸಾಕ್ಷಿ ಅದನ್ನು ಒಪ್ಪಿಕೊಂಡಿದ್ದು **ಅದನ್ನು ನಿ.ಡಿ 7 ಮತ್ತು 8 ಎಂದು ಗುರುತಿಸಲಾಯಿತು**.

ಸದರಿ ದಾವೆಯಲ್ಲಿ ನನ್ನ ಅಣ್ಣ ದಾವಾ ಐ ಟಂ ನಂ 25 ರಪಶ್ಚಿಮಕ್ಕೆ ಇರುವ ಜಾಗವನ್ನು ಖಾಲಿ ಮಾಡಿಸುವಂತೆ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನನ್ನ ಅಣ್ಣನೇ ಸದರಿ ಸ್ವತ್ತಿನ ಮಾಲಿಕರು ಇರುತ್ತಾರೆ ಮತ್ತು ಆ ಪ್ರಕರಣದ ಪ್ರತಿವಾದಿಗಳು ತೊಂದರೆ ನೀಡಬಾರದೆಂದು ಆದೇಶವಾಗಿರುತ್ತದೆ ಸದರಿ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. ಸದರಿ ಸ್ವತ್ತಿಗೆ ತೊಂದರೆ ನೀಡಿದಾಗ ನೀವು ಕೇಳಿದ್ದೀರಾ ಎಂದರೆ ಸಾಕ್ಷಿ ನಾನು ಮನೆಯನ್ನು ನೋಡಿಕೊಂಡಿದ್ದು ಹೊರಗೆ ಕಳುಹಿಸಿಲ್ಲವೆಂದು ಹೇಳುತ್ತಾರೆ.

ದಾವಾ ಐ ಟಂ ನಂ 25 ರ ಸ್ವತ್ತನ್ನು ಪಡೆದು ಅವರ ಸದರಿ ಮನೆಯಲ್ಲಿ ಪ್ರತ್ಯಕವಾಗಿ ವಾಸ ಮಾಡಿಕೊಂಡು ಇದ್ದರು ಎಂದರೆ ಸಾಕ್ಷಿ ನಾನು ಊರಿನಲ್ಲಿದ್ದು ಅವರು ಸದರಿ ಮನೆಯಲ್ಲಿದ್ದರು ಎಂದು ಹೇಳುತ್ತಾರೆ. ನಿ.ಡಿ 4 ರ ಪ್ರಮಾಣ ಪತ್ರದಲ್ಲಿ ನಾನು ಮತ್ತು ನನ್ನ ತಂದೆ ಹಣ ನೀಡಿರುವ ಬಗ್ಗೆ ಬರೆದಿರುವುದಿಲ್ಲ ಕಾರಣ ಅವರೇ ವ್ಯವಹಾರ ಮಾಡುತ್ತಿದ್ದರು ಎಂದು ಹೇಳುತ್ತಾರೆ. ನಾನು ನನ್ನ ತಂದೆ ಹಣವನ್ನು ನೀಡಿರುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲವೆಂದರೆ ಸಾಕ್ಷಿ ಒಟ್ಟು ಕುಟುಂಬದಲ್ಲಿದ್ದೇವೆಂದು ಹೇಳುತ್ತಾರೆ.

ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಿ ಸದರಿ ಮನೆಯನ್ನು ನೀವು ರಾಜಗಿರಿಯಲ್ಲಿದಲ್ಲಿದಾಗ ಕಟ್ಟಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ಒಪ್ಪಿಕೊಂಡಿದ್ದು **ಅದನ್ನು ನಿ.ಡಿ 9 ಎಂದು ಗುರುತಿಸಲಾಯಿತು**. ಸದರಿ ಮನೆ ಆರ್.ಸಿ.ಸಿ ಡ್ಯೂಪ್ಲಕ್ಸ ಮನೆ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಮನೆಯಲ್ಲಿ ನಾನು ವಾಸ ಮಾಡುತ್ತಿದ್ದೇನೆ ಎಂದರೆ ಸರಿ. ಸದರಿ ಮನೆಯನ್ನು ಈ ಪ್ರಕರಣದಲ್ಲಿ ಸೇರಿಸಿಲ್ಲವೆಂದರೆ ಸಾಕ್ಷಿ ಅದು ಜಮೀನು ಸರ್ವೆ ನಂ 35 ರಲ್ಲಿ ಬರುತ್ತದೆ ಎಂದು ಹೇಳುತ್ತಾರೆ. ಈ ಬಗ್ಗೆ ಖಾತಾ ಎಕ್ಸ ಟ್ರಾಕ್ಟ ಅನ್ನು ಕೊಟ್ಟಿಲ್ಲವೆಂದರೆ ಸಾಕ್ಷಿ ಜಮೀನಿನಲ್ಲಿ ಇದ್ದ ಕಾರಣ ಜಮೀನಿಗೆ ಸೇರಿಸಲಾಗಿದೆ ಎಂದು ಹೇಳುತ್ತಾರೆ.

ಸದರಿ ಮನೆಯನ್ನು ದಾವಾ ಐ ಟಂ ನಂ 8 ರಲ್ಲಿ ತೋರಿಸಿಲ್ಲ ಅದನ್ನು ಖಬಳಿಸುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮನೆಯಲ್ಲಿ ಪ್ರತಿವಾದಿ 1 ಅವರಿಗೆ ಭಾಗ ನೀಡಬೇಕಾಗುತ್ತದೆಂದು ಸೇರಿಸಿಲ್ಲವೆಂದರೆ ಸರಿಯಲ್ಲ. ಸರ್ವೆ ನಂ 13/3 ಸಿ ಯಲ್ಲಿ ನನ್ನ ಹೆಸರಿಗೆ 5 ಗುಂಟೆ ನನ್ನ ಹೆಸರಿಗೆ ಬರುತ್ತಿದೆ ಎಂದರೆ ಸರಿಯಲ್ಲ. ಸದರಿ ಸ್ವತ್ತನ್ನು ನನ್ನ ತಂದೆಯ ಮರಣಾ ನಂತರ ಎಂ.ಆರ್ ಹೆಚ್ 22/2024/25 ರಂತೆ ನನ್ನ ಹೆಸರಿಗೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.  ಸದರಿ ಸ್ವತ್ತನ್ನು ಈ ದಾವೆಯಲ್ಲಿ ಸೇರಿಸಿಲ್ಲವೆಂದರೆ ಸಾಕ್ಷಿ ನನೆ ಗೊತ್ತಿಲ್ಲವೆಂದು ಹೇಳುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ
ಕುಣಿಗಲ್.